ಓನರನ್ನು. ನನ್ನನ್ನು ಏನಂತ ತಿಳದೀರಿ? ಇಂತಿಂಥ ಪ್ರಶಸ್ತಿ ವಿಜೇತನು. ನಿಮ್ಮ ಎಸ್ಪಿ ನನ್ನ ಅಭಿಮಾನಿ. ಅಬಕಾರಿ ಮಂತ್ರಿ ನನ್ನ ಗೆಳೆಯ' ಎಂದು ಬಿರುದಾವಳಿ ಉಗ್ಘಡಿಸಿದರು. ಬಾರಿನ ಮಾಲೀಕನು ಪೊಲೀಸರಿಗೆ ವರದಿಸಲು 'ಅಂವ್ನ ದೇವರೇ ಇರವಲ್ಯಾಕ. ಖೋಲಿಯೊಳಗ ಕೂಡಹಾಕ್ರಿ. ಮುಂಜಾಲಿ ಬಂದು ವಿಚಾರಿಸಿಕೊಳ್ಳತೀವಿ' ಎಂದು ಬದಲು ಸಿಕ್ಕಿತು. ತತ್ಪರಿಣಾಮ ವಾಗ್ಮಿಗಳೂ ಅವರ ಹಿಂಬಾಲಕರೂ ಬಾರೆಂಬ ಸೆರೆಮನೆಯಲ್ಲಿ ಸೊಳ್ಳೆಯ ಸಂಗೀತಕ್ಕೆ ಶ್ರೋತೃಗಳಾಗಿ ರಾತ್ರಿ ಕಳೆಯಬೇಕಾಯಿತು. ಚುಕ್ಕಾಡಿಗಳು ಅವರ ನೆತ್ತರೊಟ್ಟಿಗೆ ಅಹಮನ್ನೂ ಹೀರಿದವೆಂದು ಕಾಣುತ್ತದೆ. ಅರುಣೋದಯಕ್ಕೆ ಮುನ್ನ ವಾಗ್ಮಿಗಳು ಸದ್ದಿಲ್ಲದೆ ಹೊರಬಿದ್ದು ಅನಾರೋಗ್ಯ ನಿಮಿತ್ತ ಭಾಷಣ ರದ್ದುಪಡಿಸಿ ತಮ್ಮೂರನ್ನು ಸೇರಿಕೊಂಡರು.

ದೈಹಿಕವಾಗಿ ಮಾನಸಿಕವಾಗಿ ದುರ್ಬಲರಾದ ಪಾನಿಗಳು ನಿಜಕ್ಕೂ ಕರುಣಾರ್ಹರು. ಆದರೆ ಅವರ ಕೈಹಿಡಿದೆತ್ತುವ ಮುನ್ನ ಹತ್ತುಸಲ ಆಲೋಚಿಸಬೇಕು. ಅವಗಾಹನೆಗೆ ಎರಡು ಪ್ರಸಂಗಗಳನ್ನು ನಿರೂಪಿಸುವೆ–

1. ಸುಡುಮಧ್ಯಾಹ್ನ ಬಜಾರಿನಿಂದ ಮರಳುತಲಿದ್ದೆ. ಬೀದಿತುದಿಯಲ್ಲಿ ಹಳೇಪೇಪರ್ ಸಂಗ್ರಹಿಸುವವನು ಸೈಕಲನ್ನು ಮರಕ್ಕೊರಗಿಸಿ ಕೈಗಳನ್ನು ತಲೆಗೆಹೊರೆಸಿ ಕುಳಿತಿದ್ದ. ದುಡಿವ ವರ್ಗದ ಮೇಲೆ ಅನುಭೂತಿಯುಳ್ಳ ನಾನು, ಅವನ ಪಿಂಜರಾಪೋಲನ್ನು ಕಂಡು, 'ಯಾಕಪ್ಪಾ' ಎಂದೆ. 'ಸೈಕಲ್ ಹೊಡೆಯೋಕೆ ಆಗತಿಲ್ಲ ಸ್ವಾಮಿ. ಹೊಟ್ಟೆಯಲ್ಲಿ ಏನೂ ಇಲ್ಲ' ಎಂದ. 'ಗೋದಾಮುಗಳಲ್ಲಿ ಆಹಾರಧಾನ್ಯ ತುಳುಕಾಡುತ್ತಿದೆ; ಜನ ಉಪವಾಸವಿದ್ದಾರೆ. ಇದೆಂಥ ವೈರುಧ್ಯ' ಎಂದು ವ್ಯವಸ್ಥೆಯ ಮೇಲೆ ಆಕ್ರೋಶ ಬಂತು. 'ಮನೆಗೆ ಬಾರಪ್ಪ' ಎಂದು ಕರೆತಂದೆ. ಅತಿಥಿಗೆ ತಕ್ಷಣ ತಿನ್ನಲು ಏನಾದರೂ ಕೊಡಬೇಕೆಂದು ಬಾನುಗೆ ಅಪ್ಪಣೆ ಮಾಡಿದೆ. 'ಹಾದಿಬೀದಿಯ ಜನರನ್ನ ಹೊತ್ತಲ್ಲದ ಹೊತ್ತಲ್ಲಿ ಕರಕೊಂಡು ಬಂದು ಊಟಹಾಕು ಅಂದರೆ ಇದೇನು ಹೋಟಲಾ? ಸತಾಯಿಸಬೇಡ. ಬ್ರೆಡ್ಡಿದೆ. ಟೀಮಾಡಿ ಕೊಡ್ತೀನಿ' ಎಂದು ಗೊಣಗುತ್ತ ಅತಿಥಿ ಪರಿಶೀಲನೆಗೆಂದು ಹೊರಹೋದಳು. 'ಅಯ್ಯೋ ನೀನೇನೊ, ಥೂ! ನಿನ್ನ ಬಾಯಿಗೆ ಮಣ್ಣಾಕ' ಎಂಬ ಹರಕೆ ಕೇಳಿಸಿತು. ಆಕೆ ಹಾಯುವ ಹಸುವಿನಂತೆ ತಿರುಗಿ ಬಂದವಳೇ, 'ಸೈಕಲ್ ಹೊಡಿಯೋಕೆ ಆಗದಷ್ಟು ಕುಡಿದಿದಾನೆ. ವಾಸನೆ ಫರ್ಲಾಂಗ್ ದೂರಕ್ಕೆ ಹೊಡೀತಿದೆ. ಅಷ್ಟು ಗೊತ್ತಾಗಲಿಲ್ಲವಾ?' ಎಂದು ಕೂಗಾಡಿದಳು. ಮನೆಗೆಲಸದ ತಾಯಮ್ಮನಿಂದ ಗಂಡನ ಕಿರಿಕ್ಕನ್ನು ಕೇಳಿಕೇಳಿ ಅವಳಲ್ಲಿ ಕುಡುಕರ ಮೇಲೆ ತಿರಸ್ಕಾರ ಬೆಳೆದಿತ್ತು. ನಾನು ಆಹ್ವಾನಿತನ ವಿಚಾರಣೆಗೆಂದು ಅಂಗಳಕ್ಕೆ ಬಂದೆ. ಸೈಕಲು ತನ್ನ ಸವಾರನ ಸಮೇತ ಕಣ್ಮರೆಯಾಗಿತ್ತು.

2. ಮುಸ್ಸಂಜೆ ವಾಕಿಂಗ್ ಮುಗಿಸಿ ಬರುತ್ತಿದ್ದೆ. ಧರೆಗಿಳಿಯುತ್ತಿದ್ದ ನಸುಗತ್ತಲಲ್ಲಿ ಯಜಮಾನರೊಬ್ಬರು ಎಡದಂಡೆ ಕಾಲುವೆಗುಂಟ ಹರಿದ ಗಾಳಿಪಟದಂತೆ ಹೊರಟಿದ್ದರು. ಅವರು ಹೊರಟ ದಿಕ್ಕಲ್ಲಿ ಯಾವುದೇ ಊರಿರಲಿಲ್ಲವಾಗಿ, ಶಂಕೆಗೊಂಡು ವಿಚಾರಿಸಿದೆ. ಮಾನ್ಯರು ತೆಂಗಿನತೋಟದಲ್ಲಿ ನೀರಾ ಏರಿಸಿದ ಫಲವಾಗಿ ದಶದಿಕ್ಕುಗಳು ಅದಲುಬದಲಾಗಿ, ಸ್ವಗೃಹದ ವಿರುದ್ಧ ದಿಸೆಯಲ್ಲಿ ಹೊರಟಿದ್ದರು. ಕೈಹಿಡಿದು ಕರೆತಂದೆ. ಅವರನ್ನು ಸ್ಕೂಟರಿನಲ್ಲಿ ಕರೆದೊಯ್ದು ಮನೆಗಿಳಿಸಿ ಪುಣ್ಯ ಕಟ್ಟಿಕೊಳ್ಳುವುದು ನನ್ನ ಮನೀಶೆ. ಅವರಿಗೆ ಸ್ಕೂಟರಿನ ಮೇಲೆ ಭದ್ರವಾಗಿ ಕೂರುವುದಕ್ಕೇ ಸಾಧ್ಯವಾಗಲಿಲ್ಲ. ಸೊಂಟ ಹಿಡಕೊಳ್ಳಪ್ಪಾ ಎಂದೆ. ತೋಳಬಂಧದಲ್ಲಿ ಬಿಗಿತವಿರಲಿಲ್ಲ. ನಡುವೆಯೇ ಬಿದ್ದುಹೋಗುವ ಎಲ್ಲ ಸಾಧ್ಯತೆಯಿತ್ತು. ನನ್ನ ಲೋಕೋಪಕಾರಿ ಉಮೇದನ್ನು ಸದಾ ಅಸಡ್ಡೆಯಿಂದ ನೋಡುವ ಬಾನು, ಹಾಳಾಗಲೆಂದು ತೆಳ್ಳನೆಯ ಅಂಗವಸ್ತ್ರ